ಯೋಧರ ಖಡ್ಗವೆಂಬ ಉದ್ಯಾನದಲ್ಲಿ ವಿಹರಿಸುವ ಈ ರಾಜ್ಯಲಕ್ಷ್ಮೀ, ನಿಶ್ಚಲವಾಗಿ ಭರತನ ಎದೆಯಲ್ಲಿ ನೆಲೆಸಲಿ ಎಂದು ಗೆದ್ದ ರಾಜ್ಯವನ್ನು ಅಣ್ಣನಿಗೆ ಒಪ್ಪಿಸಿ, ನಾನು ನಿನ್ನ ವಿಷಯದಲ್ಲಿ ಅವಿನಯವಾಗಿ ವರ್ತಿಸಿದ್ದೇನೆ, ಆ ದೋಷವನ್ನು ತಪಸ್ಸಿನ ಮೂಲಕ ಕಳೆದುಕೊಳ್ಳುವೆನೆಂದು ನಿರ್ಧರಿಸುತ್ತಾನೆ. ಪದ್ಯದಲ್ಲಿ ಬರುವ 'ಲತಾಂಗಿ', 'ಧರೆ' ಎಂಬ ಶಬ್ದಪ್ರಯೋಗದಲ್ಲಿ ಇರುವ ಅರ್ಥವೈಶಾಲ್ಯವನ್ನು ಗಮನಿಸಬೇಕು. ನೀನು ಬಯಸಿರುವ ಹೆಣ್ಣನ್ನೂ (ಮಡದಿ), ಭೂಮಿಯನ್ನೂ (ತಾಯಿ) ನಾನು ಬಯಸಿದರೆ ನನ್ನ ಕೀರ್ತಿಯು ಮಾಸುವುದಿಲ್ಲವೆ? ಎಂಬ ಪ್ರಶ್ನೆ ಎದುರಾಳಿಯನ್ನು ಮೂಕವಿಸ್ಮಿತನನ್ನಾಗಿ ಮಾಡುತ್ತದೆ. ಕೇವಲಜ್ಞಾನ ನಿರತನಾದ ಬಾಹುಬಲಿಯ ಬಳಿಗೆ ಬಂದು ಕ್ಷಮೆಯಾಚಿಸಿದ ಭರತ ಕಾಲಾನಂತರದಲ್ಲಿ ತಾನೂ ವೈರಾಗ್ಯ ಪರನಾಗುತ್ತಾನೆ.

ಭರತನ ಸರ್ವಾಧಿಕಾರಿ ವ್ಯಕ್ತಿತ್ವವನ್ನು, ಮಾನವ ಸಹಜವಾದ ಅಹಂಕಾರವನ್ನು ಪಂಪ ಈ ಭಾಗದಲ್ಲಿ ನಿರೂಪಿಸಿರುವ ಕ್ರಮ ಆಗಮಿಕ ನೆಲೆಯದ್ದಲ್ಲ.

ಸೋದರರೊಳ್ ಸೋದರರಂ । ಕಾದಿಸುವುದು ಸುತನ ತಂದೆಯೊಡೆಯೊಳ್ಪಿಡದು
ತ್ತಾದಿಸುವುದು ಕೋಪಮನಳ । ವೀ ದೊರೆತೆನೆ ತೊಡರ್ವುದೆಂತೊ ರಾಜ್ಯಶ್ರೀಯೊಳ್

ಸಂಪತ್ತು ಸಹೋದರರಲ್ಲಿ ಪರಸ್ಪರ ಕಲಹವನ್ನು ತರುತ್ತದೆ; ತಂದೆ ಮಕ್ಕಳ ಮಧ್ಯೆ ಕೋಪವನ್ನು ತಂದಿಡುತ್ತದೆ. ರಾಜ್ಯವಿಮೋಹವನ್ನು ಕವಿ ಸಾರ್ವಕಾಲಿಕ ಮೌಲ್ಯವೆಂದೇ ಭಾವಿಸಿದಂತಿದೆ. ರಾಜ್ಯ ಮತ್ತು ಹೆಣ್ಣಿನ ಪ್ರತಿಮೆ ಮೂಲಕ ಹಲವಾರು ಅರ್ಥ ಪರಂಪರೆಯನ್ನು ಕಾವ್ಯ ಭಾಗದುದ್ದಕ್ಕೂ ಪಂಪ ತೆರೆದಿಡುತ್ತಾನೆ. ಆಸ್ತಿಯ ಕಾರಣಕ್ಕಾಗಿ ಸಹೋದರರಿಬ್ಬರು ಹೋರಾಡಿದರು ಎಂಬುದು ಸಾಮಾನ್ಯ ಅರ್ಥ. ಅದು ಲೋಕ ರೂಢಿಯಲ್ಲಿ ಸತ್ಯ ಸಂಗತಿಯೆಂಬುದನ್ನು ಕವಿ ಸಮರ್ಥಿಸಿದ್ದಾನೆ. ಈ ಪ್ರಸಂಗವನ್ನು ಒಂದು ರೂಪಕವನ್ನಾಗಿ ಗ್ರಹಿಸಿದರೆ, ಎಲ್ಲಾ ಕಾಲ ಸಂದರ್ಭದಲ್ಲಿನ ಸಾಮಾಜಿಕ ವಿಪರ್ಯಾಸಗಳನ್ನೇ ಧ್ವನಿಸುತ್ತಿರುವಂತೆ ಭಾಸವಾಗುತ್ತದೆ. ಆಸ್ತಿ, ಹಣ, ಅಧಿಕಾರಗಳೆಂಬ ವ್ಯಸನತ್ರಯಗಳಿಂದ ಬೀಗುವ ಅಹಂಕಾರಮತ್ತ ಶ್ರೀಮಂತವರ್ಗ ಇಂಥ ಕಥೆಯನ್ನು ಕೇಳಿ ಒಂದು ಕ್ಷಣ ವಿಚಲಿತವಾಗದೇ ಇರದು.

## ಕುಮಾರಚಲ್ಯ

ಕುಮಾರಚಲ್ಯ ಎಂಬ ಕಾವ್ಯನಾಮದಲ್ಲಿ ಬರೆಯುವ ಕವಿ, ವಿಮರ್ಶಕ, ಸಂಶೋಧಕ ಸಿ.ಎಸ್. ಶಿವಕುಮಾರಸ್ವಾಮಿ ಶಿವಮೊಗ್ಗದ ಕುವೆಂಪು ವಿಶ್ವವಿದ್ಯಾಲಯದ ಕನ್ನಡ ಭಾರತಿಯಲ್ಲಿ ಪ್ರಾಧ್ಯಾಪಕರಾಗಿ, ಜೊತೆಗೆ ವಿವಿಧ ಹುದ್ದೆಗಳನ್ನು ನಿರ್ವಹಿಸಿ ನಿವೃತ್ತರು. 20ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿರುವ ಅವರ ಪ್ರಾತಿನಿಧಿಕ ಪುಸ್ತಕಗಳು: 'ನವಾಬ', 'ಗುಲಾಬಿ ಮತ್ತು ಪಾರಿವಾಳ' (ಕವನ ಸಂಕಲನ), 'ಕಾಲಮಾನ', 'ಅಭಿಜ್ಞಾನ', 'ನಿಚ್ಚಂ ಪೊಸತು' (ವಿಮರ್ಶೆ), 'ಬೇರು ತೋರಿದ ಹಾದಿ' (ಜಾನಪದ), 'ಹಿಂದಣ ಹೆಜ್ಜೆಯನರಿಯದೆ' (ಸಂಶೋಧನೆ). ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಕಟಣೆ 'ದೇವುಡು' ತೆಲುಗು ಭಾಷೆಗೆ ಅನುವಾದಗೊಂಡಿದೆ. ಅವರ ಪ್ರಧಾನ ಸಂಪಾದಕತ್ವದಲ್ಲಿ ಕುವೆಂಪು ಸಾಹಿತ್ಯ ಪದವಿವರಣ ಕೋಶಗಳ ಎಂಟು ಸಂಪುಟಗಳು ಪ್ರಕಟವಾಗಿವೆ. ಕುಮಾರಚಲ್ಯ ಮೂಲತಃ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಚಲ್ಯ ಗ್ರಾಮದವರು.